ಸರ್ಕಾರಿ ನೌಕರರ ವೇತನದ ಬಗ್ಗೆ

೩೭೫. ಶ್ರೀ ಬಾಬಾಗೌಡ ಪಾಟೀಲ್(ಕಿತ್ತೂರು).—ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು ೫೫ ರಿಂದ ೫೮ಕ್ಕೆ ಹೆಚ್ಚಿಸಿರುವುದರಿಂದ ಈ ಮೂರು ವರ್ಷಗಳಲ್ಲಿ ಅವರಿಗೆ ಸಂಬಳ ಹಾಗೂ ಭತ್ಯೆ ಇತ್ಯಾದಿಗಳಿಗೆ ಒಟ್ಟು ಖರ್ಚಾಗುವ ಹಣವೆಷ್ಟು ?

ಆ) ಸರ್ಕಾರಿ ನೌಕರರನ್ನು ೫೫ನೇ ವರ್ಷಕ್ಕೆ ನಿವೃತ್ತಿಗೊಳಿಸುವುದರಿಂದ ಉಳಿತಾಯವಾಗುವ ಹಣದಿಂದ ಎಷ್ಟು ಜನರಿಗೆ ನಿರುದ್ಯೋಗ ಭತ್ಯೆ ಕೊಡಬಹುದು ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮಂತ್ರಿಗಳು).—

(ಅ) ಮತ್ತು (ಆ) ಈ ವಿಷಯದ ಬಗ್ಗೆ ಮಾಹಿತಿಯು ಲಭ್ಯವಿಲ್ಲ. ರಾಜ್ಯದಲ್ಲಿ ನಿರುದ್ಯೋಗಿ ಭತ್ಯೆ ನೀಡುವಿಕೆ ಯೋಜನೆ ಇಲ್ಲವಾದುದರಿಂದ. ನಿವೃತ್ತಿ ವಯಸ್ಸನ್ನು ಕಡಿತಗೊಳಿಸುವುದರಿಂದ ದೊರೆಯುವ ಉಳಿತಾಯದಿಂದ ಎಷ್ಟು ಜನ ನಿರುದ್ಯೋಗಿಗಳಿಗೆ ಭತ್ಯೆ ನೀಡಲು ಸಾಧ್ಯವೆಂಬುದು ಅಂದಾಜು ಮಾಡಲಾಗದು.

ಕೇಂದ್ರ ಸರ್ಕಾರದ ಸಹಾಯಧನ ಬಗ್ಗೆ

೩೭೬. ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು). —ಮಾನ್ಯ ಹಣಕಾಸು ಮತ್ತು ಸಾಂಖ್ಯಿಕ ಹಣಕಾಸು ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ೧೯೮೯—೯೦ನೇ ಸಾಲಿನಲ್ಲಿ ಎಷ್ಟು ಹಣ ನೀಡಿದೆ (ಸಂವಿಧಾನ ಬದ್ಧವಾಗಿ ರಾಜ್ಯಕ್ಕೆ ಸಿಗಬೇಕಾದ ಪಾಲು ಮತ್ತು ಸಹಾಯಧನ ಪ್ರತ್ಯೇಕ ವಿವರ ನೀಡುವುದು) ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮಂತ್ರಿಗಳು).—

ಅ) ೧೯೮೯—೯೦ರ ಪರಿಷ್ಕೃತ ಅಂದಾಜಿನ ಪ್ರಕಾರ ಕೇಂದ್ರ ಸರ್ಕಾರದಿಂದ ಸಂವಿಧಾನ ಬದ್ಧವಾಗಿ ಬರಬಹುದಾದ ಪಾಲು ಮತ್ತು ಸಹಾಯಧನ ಈ ರೀತಿ ಇದೆ

(ಲಕ್ಷ ರೂ.ಗಳಲ್ಲಿ)

೧) ಕೇಂದ್ರ ಸರ್ಕಾರದಿಂದ ರಾಜ್ಯ ಯೋಜನಾ ಕಾರ್ಯಕ್ರಮ ಕೇಂದ್ರ ಯೋಜನಾ ಕಾರ್ಯಕ್ರಮಗಳಿಗೆ, ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ ಮತ್ತು ಯೋಜನೇತರ ಅನುದಾನಗಳಿಗೆ ಬರಬಹುದಾದ ಸಹಾಯ ಧನ. ೩೨೪೪೦.೦೦

೨) ಉತ್ಪಾದನಾ ಶುಲ್ಕ, ಮತ್ತು ನಿಗಮ ತೆರಿಗೆಯ ಹೊರತು ಪರಮಾನದ ಮೇಲಣ ತೆರಿಗೆಗಳಲ್ಲಿ ರಾಜ್ಯದ ಪಾಲು. ೬೩೨೯೦.೦೦

ಅಬಕಾರಿ ತೆರಿಗೆಯ ಬಗ್ಗೆ

೩೭೭ ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೯—೯೦ ರಲ್ಲಿ ಉತ್ಪಾದನೆ ಹಂತದಲ್ಲಿ ಅಬಕಾರಿ ಕರ ಆಕರಿಸಿದ್ದರೆ ಒಟ್ಟು ಕರದ ಮೊತ್ತ ಎಷ್ಟು ಆಗುತ್ತಿತ್ತು.

(ಆ) ೧೯೮೯—೯೦ನೇ ಫೆಬ್ರುವರಿ ಕೊನೆಯವರೆಗೆ ಎಷ್ಟು ಅಬಕಾರಿ ಕರ ಸಂದಾಯವಾಗಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಆರ್ಥಿಕ ಮಂತ್ರಿಗಳು).—

(ಅ) ಅಬ್ಕಾರಿ ಶುಲ್ಕವನ್ನು ಉತ್ಪಾದನಾ ಹಂತದಲ್ಲಿಯೇ ವಸೂಲಿ ಮಾಡಲಾಗುತ್ತಿದೆ.